**ಮೂ.ದಾ.ನಂ.48/2016**

ಪಿ.ಡಬ್ಲ್ಯು.1

(ಇಂದು ದಿನಾಂಕ: **16-07-2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ಡಿ.ಎಸ್.ಭಟ್ಟ ವಕೀಲರಿಂದಃ**

ದಾವಾ ದಾರಿಯಲ್ಲಿ ಟೇಲಿಫೋನ ಇಲಾಖೆಯವರು ನೆಲದ ಒಳಗಡೆ ಟೇಲಿಫೋನ ಲೈನ್‌ನ್ನು ಎಳೆದಿರುತ್ತಾರೆ. ಸದ್ರಿ ಟೇಲಿಫೋನ ಯಾವ ಇಸ್ವಿಯಲ್ಲಿ ಎಳೆದಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸದ್ರಿ ಟೇಲಿಫೋನ ಲೈನ್ ನಮ್ಮ ಸರ್ವೆ ನಂ.316/3 ರಿಂದ 316/6 ರವರೆಗೆ ಹಾದು ಹೋಗಿ ಓಣಿಯಲ್ಲಿ ಹಾದಿ ಹೋಗಿ ಪ್ರತಿವಾದಿ 5 ರವರ ಮನೆಗೆ ಸಂಪರ್ಕವನ್ನು ನೀಡಿರುತ್ತಾರೆ. ಕೋರ್ಟ ಕಮೀಷನರ ಸ್ಥಳಕ್ಕೆ ಹೋಗಿದ್ದಂತಹ ಸಂದರ್ಭದಲ್ಲಿ ಸದ್ರಿ ಟೇಲಿಫೋನ್ ಲೈನಿನ ಬಗ್ಗೆ ನಾನು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ದಾವಾ ಪ್ಯಾರಾ ನಂ.2 ರಲ್ಲಿ ಹೇಳಿದಂತಹ ದಾವಾ ದಾರಿ ಅಥವಾ ಸದ್ರಿ ಟೇಲಿಫೋನ್ ಲೈನ್ ಇರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯರ ಮನೆಗಳ ಪಶ್ಚಿಮ ದಿಕ್ಕಿನಲ್ಲಿರುವ ರಾಜ ರಸ್ತೆಗೆ ಹೊಂದಿಕೊಂಡು ನಾವು ನಮ್ಮ ನಮ್ಮ ಮನೆಗಳಿಗೆ ಗೇಟುಗಳನ್ನು ಮಾಡಿಕೊಂಡು ಆ ಮೂಲಕ ಓಡಾಡುತ್ತೇವೆ ಎಂದರೆ ಸರಿ. ವಾದಿಯರ ಮನೆಗಳ ಉತ್ತರ ದಿಕ್ಕಿನಲ್ಲಿ ಸ್ವಲ್ಪ ದೂರಿನಲ್ಲಿ ರಾಜ ರಸ್ತೆಗೆ ಹೊಂದಿಕೊಂಡು ಪೂರ್ವ ಪಶ್ಚಿಮವಾಗಿ ಅಬ್ಬಿ ಓಣಿಯು ಇದೆ ಎಂದರೆ ಸರಿ. ಸದ್ರಿ ಓಣಿಯಿಂದ ಪ್ರತಿವಾದಿಗಳು ಹಾಗೂ ಸಾರ್ವಜನಿಕರು ಹಾಗೂ ದನಕರುಗಳು ಓಡಾಡುತ್ತಾರೆ ಎಂದರೆ ಸರಿ.

ಪಿ.ಡಬ್ಲ್ಯು.1

ಈ ಓಣಿಗೆ ಗೋಪಿಹಳ್ಳ ಹಾಗೂ ಚಿಕ್ಕೇರೆ ಓಣಿಯ ಚಿಕ್ಕೇರೆಯ ಕೇರಿಯ ತನಕ ಪಂಚಾಯತನವರು ಇಂಟರಲಾಕ್ ಅಳವಡಿಸಿದ್ದಾರೆ ಎಂದರೆ ಸರಿ. ಚಿಕ್ಕೇರೆ ದಾರಿ ಹಾಗೂ ಗೋಪಿಹಳ್ಳದ ದಾರಿ ಮುಂದೆ ಸೇರಿ ಗದ್ದೆ ಬೈಲು ಸೇರುತ್ತದೆ ಎಂದರೆ ಸರಿ. ಚಿಕ್ಕೇರೆ ಎನ್ನುವ ಕೇರೆಯ ಪೂರ್ವ ದಿಕ್ಕಿನಲ್ಲಿ ಓಣಿಗೆ ಹೊಂದಿಕೊಂಡು ಒಂದು ಬದಿಯಲ್ಲಿ ಪಂಚಾಯತನಿಂದ ಅಂಚು ಕಟ್ಟಿದ್ದಾರೆ ಎಂದರೆ ಸರಿ. ಈ ರೀತಿ ಅಂಚು ಕಟ್ಟಿದರ ಬಗ್ಗೆ ಕೋರ್ಟ ಕಮೀಷನರರವರು ತಪಾಸಣೆ ಮಾಡಿ ತಮ್ಮ ವರದಿಯಲ್ಲಿ ನಮೂದಿಸಿದ್ದಾರೆ ಎಂದರೆ ಸರಿ. ಪೂರ್ವ ದಿಕ್ಕಿನಲ್ಲಿ ಓಣಿಗೆ ಹೊಂದಿಕೊಂಡು ಒಂದು ಬದಿಯಲ್ಲಿ ಪಂಚಾಯತನಿಂದ ಅಂಚು ಕಟ್ಟಿರುವುದು ಜನ ಜಾನುವಾರುಗಳು ಓಡಾಡಲು ಎಂದರೆ ಸರಿಯಲ್ಲ.

ಅಬ್ಬಿ ಗ್ರಾಮದ ಎಲ್ಲ ಸಾರ್ವಜನಿಕರು ಹಾಗೂ ವಾದಿಯರು ಪ್ರತಿವಾದಿಯರು ಓಡಾಡಲು ಹಾಗೂ ಅವರ ಜಾನುವಾರುಗಳು ಬಯಲಿಗೆ ಹೊಡೆದುಕೊಂಡು ಹೋಗಲು ಇರುವ ಒಂದೇ ದಾರಿ ಎಂದರೆ ಈಗ ಹೇಳಿದ ಚಿಕ್ಕೇರೆ ದಾರಿ ಹಾಗೂ ಗೊಪಿಹಳ್ಳದ ದಾರಿ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಗದ್ದೆ ಬಯಲಿಗೆ ಹಾಗೂ ಆಚೆ ಬದಿಯ ಆಸ್ತಿಗೆ ಹೋಗಲು ಚಿಕ್ಕೇರೆಯ ಓಣಿಯನ್ನು ಹಿಂದಿನಿಂದಲೂ ಈವರೆಗೂ ಸಹ ಉಪಯೋಗಿಸುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿಯು ಉತ್ತಮ ದರ್ಜೆಯ ಭಾಗಾಯತ ಸ್ಥಳಗಳು ಎಂದರೆ ಸರಿ. ನಾನು ದಾವಾದಲ್ಲಿ ನಮೂದಸಿದ ಪ್ರತಿವಾದಿಯ ಹಕ್ಕಿನ ಯಾವುದೇ ಭಾಗಾಯತ ಸ್ಥಳಗಳಲ್ಲಿ ಹೋಗಲು ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹೇಳಿದಂತಹ ನೀರಿನ ದಾರಿಯು ಪ್ರತಿವಾದಿಯ ಹಕ್ಕಿನ ಸ್ಥಳದಲ್ಲಿ ಆಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇತರೇ

ಆಸ್ತಿಗೆ ಹೋಗಲು ಹಾಗೂ ನೀರು ಹಾಯಿಸಲು ಈ ಮೇಲೆ ಹೇಳಿದ ಚಿಕ್ಕೇರೆ ಹಾಗೂ ಗೋಪಿ ಹಳ್ಳದ ಓಣಿಯನ್ನು ಹಿಂದಿನಿಂದಲೂ ಉಪಯೋಗಿಸುತ್ತಾ ಬಂದಿದ್ದು, ಪ್ರತಿವಾದಿಯರ ಹಕ್ಕಿನ ಸ್ಥಳದಲ್ಲಿ ಯಾವುದೇ ದಾರಿ ಅಥವಾ ನೀರಿನ ದಾರಿ ಇಲ್ಲ ಎಂದರೆ ಸರಿಯಲ್ಲ.

ನಾನು ಓಡಾಡಲು ಸುಲಭ ಮಾಡಿಕೊಳ್ಳುವ ದುರುದ್ದೇಶದಿಂದ ಪ್ರತಿವಾದಿಯರ ಜಾಗದಲ್ಲಿ ದಾರಿ ಹಾಗೂ ನೀರಿನ ದಾರಿ ಇದೆ ಎಂದು ನನ್ನ ದಾವೆಯಲ್ಲಿ ಹಾಗೂ ಹಾತ್ ನಕಾಶೆಯಲ್ಲಿ ಕಾಲ್ಪನಿಕವಾಗಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ದಾವೆಯಲ್ಲಿ ದಾವಾ ಅಸ್ತಿಗಳ ಬಗ್ಗೆ ನಿಖರವಾಗಿ ಮಾಹಿತಿಯನ್ನು ಪೂರೈಸಿದರೆ ನನ್ನ ಸುಳ್ಳು ಸಾಧನೆ ತಿಳಿಯುತ್ತದೆ ಎಂಬ ಉದ್ದೇಶದಿಂದ ನನ್ನ ದಾವೆಯಲ್ಲಿ ಅಂದಾಜಿನ ಮೇಲೆ ಸರ್ವೆ ನಂಬರನ್ನು ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ.

ನನಗೆ ಈ ಪ್ರತಿವಾದಿಗಳ ವಿರುದ್ಧ ದಾವೆ ದಾಖಲಿಸಲು ಯಾವುದೇ ಕಾರಣ ಹಾಗೂ ಸಂದರ್ಭಗಳು ಒದಗಿ ಬಂದಿಲ್ಲ ಎಂದರೆ ಸರಿಯಲ್ಲ. ಕೋರ್ಟ ಕಮೀಷನರ ವರದಿಯಲ್ಲಿ ದಾರಿ ಹಾಗೂ ನೀರಿನ ದಾರಿಯ ನಿಜ ಸ್ಥಿತಿಯ ಬಗ್ಗೆ ಅನಾವರಣಗೊಂಡಿದ್ದರಿಂದ ನಾನು ಸದ್ರಿ ವರದಿಗೆ ಸುಳ್ಳು ತಕರಾರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಉದಾಹರಣೆಯೊಂದಿಗೆ ಸಲ್ಲಿಸಿದ ಹಾತ್ ನಕಾಶೆಯನ್ನು ನಾನು ನೋಡಿರುತ್ತೇನೆ. ಪ್ರತಿವಾದಿಯರು ತಮ್ಮ ಉದಾಹರಣೆಯೊಂದಿಗೆ ಸಲ್ಲಿಸಿದ ಹಾತ್ ನಕಾಶೆಯು ಸ್ಥಳೀಯ ವಸ್ತುಸ್ಥಿತಿಗೆ ಪೂರಕವಾಗಿದೆ ಎಂದರೆ ಸರಿಯಲ್ಲ. ನನಗೆ ಪ್ರತಿವಾದಿಯರ ಹಕ್ಕಿನ ಜಾಗದಲ್ಲಿ ಯಾವುದೇ ದಾರಿ ಹಾಗೂ ನೀರಿನ ಹಕ್ಕು ನಮಗೆ ಇಲ್ಲದೇ ಇದ್ದರೂ ಕೂಡ ಪ್ರತಿವಾದಿಯರ ವಿರುದ್ಧ ಈ ಕಾಲ್ಪನಿಕ ದಾವೆಯನ್ನು ಸಲ್ಲಿಸಿ ಪ್ರತಿವಾದಿಯವರಿಗೆ ಅನಾವಶ್ಯಕವಾಗಿ ಮಾಡಿದ್ದೇನೆ ಎಂದರೆ

ಸರಿಯಲ್ಲ.   ನಾನು ತಿಳಿದು ತಿಳಿದು ಉದ್ದೇಶಪೂರ್ವಕವಾಗಿ ಪ್ರತಿವಾದಿಯರ ವಿರುದ್ಧ ಈ ಕಾಲ್ಪನಿಕ ದಾವೆಯನ್ನು ಸಲ್ಲಿಸಿರುವುದರಿಂದ ನಾನು ಅವರಿಗೆ ವಿಶೇಷ ಖರ್ಚು ರೂ.25,000-00 ವನ್ನು ನೀಡಲು ಬದ್ಧನಾಗಿದ್ದೇನೆ ಎಂದರೆ ಸರಿಯಲ್ಲ.  ನಮ್ಮ ದಾವೆಗೆ ಯಾವುದೇ ಪ್ರಾಮಾಣಿಕ ಉದ್ದೇಶ ಇಲ್ಲ ಎಂದರೆ ಸರಿಯಲ್ಲ.  ನಾನು ದಾವೆಯಲ್ಲಿ ಕೇಳಿದ ಯಾವುದೇ ಪ್ರಾರ್ಥನೆ ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ